ಸಾಕ್ಷಿಯನ್ನು ದಿಃ 02-02-2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್.ಎಸ್.ಎನ್ ವಕೀಲರಿಂದಃ-

8. ನಾನು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದೇನೆ. ನನಗೆ ಭಾಗ್ಯ ರತ್ನ ರವರ ಪರಿಚಯವಿದೆ. ಭಾಗ್ಯ ರತ್ನ ರವರು ಸಂತೋಷ್ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ನಲ್ಲಿ ಮ್ಯಾನೇಜಿಂಗಿ ಪಾರ್ಟನರ್ ಆಗಿದ್ದಾರೆ ಎಂದರೆ ಸರಿ. ನಾಗವಾರ ಪಾಳ್ಯದ ಖಾನೆ ಸುಮಾರಿ ನಂ. 100, ಖಾತಾ ಸಂಖ್ಯೆ 236 ಮತ್ತು 237 ಸುಮಾರು 6,100 ಚದರಡಿ ಇರುವ ಈ ಆಸ್ತಿಯು 2 ನೇ ಆರೋಪಿಯಾದ ಶ್ರೀಮತಿ ಎಮ್.ಯಶೋಧಮ್ಮ ರವರಿಗೆ ಸೇರಿದ್ದು ಎಂದರೆ ಸರಿ. 2 ನೇ ಆರೋಪಿ ಶ್ರೀಮತಿ ಯಶೋಧಮ್ಮ ರವರು ಈ ಆಸ್ತಿಯನ್ನು ಡೆವೆಲಪ್ ಮೆಂಟ್ ಮಾಡಲು ಸಂತೋಷ್ ಬಿಲ್ಡರ್ ಅಂಡ್ ಡೆವಲಪರ್ಸ್ ರವರಿಗೆ ನೀಡಿದ್ದರು ಎಂದರೆ ಸರಿ. ಜಾಯಿಂಟ್ ಡೆವೆಲಪ್ ಮೆಂಟ್ ಅಗ್ರಿಮೆಂಟ್ ಪ್ರಕಾರ ಈ ಆಸ್ತಿಯಲ್ಲಿ ಯಾವುದೇ ಕಟ್ಟಡ ಅಥವಾ ಬಿಲ್ಡಿಂಗ್ ಆಗಿಲ್ಲ ಎಂದರೆ ಹೌದು. 2 ನೇ ಆರೋಪಿ ಯಶೋಧಮ್ಮ ರವರು ಜಾಯಿಂಟ್ ಡೆವೆಲಪ್ ಮೆಂಟ್ ಅಗ್ರಿಮೆಂಟ್ ಮತ್ತು ಜಿ.ಪಿ.ಎ ಅನ್ನು ಕ್ಯಾನ್ಸಲ್ ಮಾಡಲು ಆರ್.ಬಿ ಟ್ರೇಷನ್ ನಲ್ಲಿ ಪ್ರಕರಣ ಹಾಕಿದ್ದಾರೆ ಎಂದರೆ ಹೌದು. ಆ ಪ್ರಕರಣವು 2 ನೇ ಆರೋಪಿಯ ಪರವಾಗಿ ಆದೇಶವಾಗಿದೆ ಎಂದರೆ ಸರಿ. ಆ ಅವಾರ್ಡ್ ನ ವಿರುದ್ದ ಪಿರ್ಯಾದುದಾರರಾದ ಭಾಗ್ಯರತ್ನಮ್ಮ ರವರು ಎ.ಎಸ್ ನಂ. 84/2017 ರಂತೆ ಪ್ರಕರಣ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎ.ಎಸ್ ನಂ. 84/2017 ರಲ್ಲಿ 2 ನೇ ಆರೋಪಿ ಯಶೋಧಮ್ಮ ಮತ್ತು ಭಾಗ್ಯ ರತ್ನರವರು ಪರಸ್ಪರ ರಾಜಿಯಾಗಿ ಭಾಗ್ಯರತ್ನರವರು ತಮಗೆ ಬರಬೇಕಾದ ಹಣವನ್ನು ಪಡೆದುಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಪಿರ್ಯಾದುದಾರ ಭಾಗ್ಯರತ್ನ ರವರು ಹಾಜರಾಗುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ.



9. 2 ನೇ ಆರೋಪಿ ಯಶೋಧಮ್ಮ ಹಾಗೂ ಚಾಸಾ 9 ಬಸವರಾಜ್ ಮತ್ತು ಚಾಸಾ 10 ಮಂಜುನಾಥ್ ರವರ ನಡುವೆ ಆದ ದಿಃ 16-02-2006 ರ ಅಗ್ರಿಮೆಂಟ್ ಆಫ್ ಸೇಲ್ ನಲ್ಲಿ ನೀವು ಸಾಕ್ಷಿದಾರರಾಗಿದ್ದೀರಿ ಎಂದರೆ ಸರಿ. ಈ ಅಗ್ರಿಮೆಂಟ್ ನಲ್ಲಿ ನಿಮ್ಮ ಹೆಸರು ಮತ್ತು ವಿಳಾಸವು ಕೈ ಬರಹದಲ್ಲಿ ಇದೆ ಎಂದರೆ ಸರಿ. ಈ ಅಗ್ರಿಮೆಂಟ್ ನಲ್ಲಿ ನಂತರ ಶರಾ ಹಾಕಿದ್ದು ಈ ಶರಾಕ್ಕೂ ಸಹ ನಿಮ್ಮ ಹೆಸರು ಮತ್ತು ವಿಳಾಸ ಕೈ ಬರವಣಿಗೆಯಲ್ಲಿದೆ ಎಂದರೆ ಸರಿ. ಆದ್ದರಿಂದ ನೀವು ಭಾಗ್ಯ ರತ್ನಮ್ಮ, ಚಾಸಾ 9 ಬಸವರಾಜ್ ಮತ್ತು ಚಾಸಾ 10 ಮಂಜುನಾಥ್ ರವರಿಗೆ ಸಹಾಯವಾಗಲಿಯೆಂದು ಸುಳ್ಳು ಸಾಕ್ಷ್ಯ ನುಡುಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ

ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

**ಓ  ಹೇ ಕೇ ಸ  ಇ  ಒ**

4 ನೇ ಅ ಮು ಮ ದಂ ನ್ಯಾ